# <u>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.</u>

***ದಿನಾಂಕ 21/09/2020 ನೇ ಸೋಮವಾರ ಅಪರಾಹ್ನ 12.15 ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ.ಎನ್. ಧರ್ಮಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಾಮಾನ್ಯ ಸಭೆಯ ನಡವಳಿಗಳು.***

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಧರ್ಮಪ್ಪ ಸಿ.ಎನ್., ಅಧ್ಯಕ್ಷರು | 1 | ಶ್ರೀಮತಿ ಡಿ.ಎನ್. ರೂಪ, ಸದಸ್ಯರು |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | | |
| 3 | ಶ್ರೀ ಚಂದ್ರಶೇಖರ್ ಕೆ.ಎಸ್., ಸದಸ್ಯರು | | |
| 4 | ಶ್ರೀ ಜಯರಾಮ, ಸದಸ್ಯರು | | |
| 5 | ಶ್ರೀಮತಿ ಮಂಜುಳ, ಸದಸ್ಯರು | | |
| 6 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು | | |
| 7 | ಶ್ರೀಮತಿ ಪಾರ್ವತಮ್ಮ, ಸದಸ್ಯರು | | |
| 8 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 9 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 10 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |
| 11 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು | | |
| 12 | ಶ್ರೀ ಆರ್. ಚಿಕ್ಕೇಗೌಡ, ಸದಸ್ಯರು | | |
| 13 | ಶ್ರೀ ರೇಣುಕಾಪ್ರಸಾದ್, ಸದಸ್ಯರು | | |
| 14 | ಶ್ರೀ ಮಹಲಿಂಗಪ್ಪ, ಸದಸ್ಯರು | | |
| 15 | ಶ್ರೀ ದೇವರಾಜು ಡಿ.ಜಿ., ಸದಸ್ಯರು | | |
| 16 | ಶ್ರೀ ಬಿ.ಆರ್. ಶ್ರೀಹರಿ, ಉಪ ನಿರ್ದೇಶಕರು, ಇಲಾಖಾ ಪ್ರತಿನಿಧಿ | | |

***ವಿಷಯ 1):*** ***ಸಮಿತಿಯ ಹಿಂದಿನ ಸಾಮಾನ್ಯ ಸಭೆ ದಿನಾಂಕ 13/08/2020 ರ ನಡವಳಿಗಳನ್ನು ಓದಿ ಒಪ್ಪಿ ದಾಖಲಿಸುವ ವಿಚಾರ.***

ತೀರ್ಮಾನ: ದಿನಾಂಕ 13/08/2020 ರ ಸಮಿತಿ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಒಪ್ಪಲಾಯಿತು.

***ವಿಷಯ 2):*** ***ಕೃಉಮಾಸ, ಅರಸೀಕೆರೆ – ಆಗಸ್ಟ್ 2020 ನೇ ಮಾಹೆಯ ಜಮಾ-ಖರ್ಚಿನ ತಃಖ್ತೆಯನ್ನು ಪರಿಶೀಲಿಸಿ ಒಪ್ಪುವ ವಿಚಾರ.***

ತೀರ್ಮಾನ: ಸಮಿತಿಯ ಆಗಸ್ಟ್ – 2020 ರ ಮಾಹೆಯ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ವಿವರವಾಗಿ ಪರಿಶೀಲಿಸಿ ಒಪ್ಪಲಾಯಿತು.

***ವಿಷಯ 3):*** ***ಕೃಉಮಾಸ, ಅರಸೀಕೆರೆ – ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ ಸಇ/306/ಎಂ.ಆರ್.ಇ./2020/ಇ.ಅ./ಬೆಂಗಳೂರು ದಿನಾಂಕ 04/08/2020 ರ ಆದೇಶದಂತೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಕೃಮಾಇ/ನಿಯವಿ/ತಿದ್ದುಪಡಿ/17/2020-21 ದಿನಾಂಕ 05/08/2020 ರನ್ವಯ "ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕದ ದರವನ್ನು ಇಳಿಸಿದ್ದು" ಸಮಿತಿಯ ಉಪ ನಿಯಮ (ಬೈಲಾ) ಸಂಖ್ಯೆ 11(1) ಕ್ಕೆ ತಿದ್ದುಪಡಿಗಾಗಿ ಸಮಿತಿಯ ಪ್ರಕಟಣೆ ದಿನಾಂಕ 14/08/2020 ರನ್ವಯ ಸ್ವೀಕರಿಸಲಾದ ಸಲಹೆ/ ಸೂಚನೆ/ ಆಕ್ಷೇಪಣೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಸರ್ಕಾರದ ನಡವಳಿ ಆದೇಶ ಸಂಖ್ಯೆ ಸಇ/306/ಎಂ.ಆರ್.ಇ/2020/ಇ.ಅ/ಬೆಂಗಳೂರು ದಿನಾಂಕ 04/08/2020 ರ ಆದೇಶದಂತೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆಕೃಮಾಇ/ನಿಯವಿ/ತಿದ್ದುಪಡಿ/17/2020-21 ದಿನಾಂಕ 05/08/202 ರನ್ವಯ

“ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕದ ದರವನ್ನು ಶೇ. 0.35 ಕ್ಕೆ ಇಳಿಸಿರುವುದರ ಬಗ್ಗೆ” ಸಮಿತಿಯ ಬೈಲಾ ಸಂಖ್ಯೆ 11(1) ಕ್ಕೆ ತಿದ್ದುಪಡಿ ಬಗ್ಗೆ ಈ ಕಛೇರಿ ಪ್ರಕಟಣೆ ಸಂಖ್ಯೆ ಕೃಉಮಾಸ/ಅರಸೀಕೆರೆ/773/2020–21 ದಿನಾಂಕ 14/08/2020 ರಲ್ಲಿ 30 ದಿವಸಗಳ ಕಾಲಾವಕಾಶ ನೀಡಿ ಸಾರ್ವಜನಿಕರಿಂದ, ರೈತರಿಂದ ಹಾಗೂ ಪೇಟೆ ಕಾರ್ಯಕರ್ತರಿಂದ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಸದರಿ ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿರುವುದನ್ನು ಸಮಿತಿಯು ಪರಿಶೀಲಿಸಿತು. ಅದರಂತೆ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕ ಶೇ. 0.35 ಕ್ಕೆ ಈ ಕೆಳಕಂಡಂತೆ ಪರಿಷ್ಕರಿಸಬಹುದೆಂದು ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.

| ಕ್ರ.ಸಂ. | ವಿವರ | ತಿದ್ದುಪಡಿ ಪೂರ್ವ ಸಮಿತಿಗೆ ಆಕರಿಸುತ್ತಿರುವ ಬಳಕೆದಾರರ ಶುಲ್ಕ/ ಮಾರುಕಟ್ಟೆ ಶುಲ್ಕದ ಮೊತ್ತ (ಒಣ ದ್ರಾಕ್ಷಿ ಉತ್ಪನ್ನವನ್ನು ಹೊರತುಪಡಿಸಿ) | ತಿದ್ದುಪಡಿ ನಂತರ ಸಮಿತಿಗೆ ಆಕರಿಸುತ್ತಿರುವ ಬಳಕೆದಾರರ ಶುಲ್ಕ/ ಮಾರುಕಟ್ಟೆ ಶುಲ್ಕದ ಮೊತ್ತ (ಒಣ ದ್ರಾಕ್ಷಿ ಉತ್ಪನ್ನವನ್ನು ಹೊರತುಪಡಿಸಿ) |
|---|---|---|---|
| 1 | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966 ರ ಕಲಂ 65(2) ರ ಮೇರೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕ (ಒಣದ್ರಾಕ್ಷಿ ಉತ್ಪನ್ನಕ್ಕೆ ಶೇ. 0.10 ನ್ನು ಮುಂದುವರೆಸಿ) | ದಿನಾಂಕ 21/07/2020 ರವರೆಗೆ ಮಾರುಕಟ್ಟೆ ಶುಲ್ಕ ಶೇ. 1.5, ಬಳಕೆದಾರರ ಶುಲ್ಕ ಶೇ. 1 ಒಣದ್ರಾಕ್ಷಿ ಉತ್ಪನ್ನಕ್ಕೆ ಶೇ. 0.10<br><br>ದಿನಾಂಕ 21/07/2020 ರಿಂದ ಮಾರುಕಟ್ಟೆ ಶುಲ್ಕ ಶೇ. 1.00, ಬಳಕೆದಾರರ ಶುಲ್ಕ ಶೇ. 1.00 ಒಣದ್ರಾಕ್ಷಿ ಉತ್ಪನ್ನಕ್ಕೆ ಶೇ. 0.10 | ದಿನಾಂಕ 04/08/2020 ರಿಂದ ಅನ್ವಯವಾಗುವಂತೆ ಒಣದ್ರಾಕ್ಷಿ ಉತ್ಪನ್ನವನ್ನು ಹೊರತುಪಡಿಸಿ ಉಳಿದ ಎಲ್ಲಾ ಅಧಿಸೂಚಿತ ಕೃಷಿ ಉತ್ಪನ್ನಗಳಿಗೆ ಶೇ. 0.35<br>ಹೂವು ಹಣ್ಣು, ತರಕಾರಿ ಅಧಿಸೂಚಿತ ಕೃಷಿ ಉತ್ಪನ್ನಗಳಿಗೆ ಬಳಕೆದಾರರ ಶುಲ್ಕ ಶೇ. 0.35, ಒಣ ದ್ರಾಕ್ಷಿ ಉತ್ಪನ್ನಕ್ಕೆ ಶೇ. 0.10 |

ಮೇಲ್ಕಂಡಂತೆ ಪರಿಷ್ಕರಿಸಿದ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕ ಶೇ. 0.35 ರಂತೆ ಆಕರಿಸುವ ಬಗ್ಗೆ ಸಮಿತಿಯ ಬೈಲಾ ಸಂಖ್ಯೆ 11(1) ಕ್ಕೆ ಅಳವಡಿಸಿಕೊಳ್ಳಲು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರಿಂದ ಮಂಜೂರಾತಿ ಪಡೆದು ಕಾರ್ಯಗತಗೊಳಿಸತಕ್ಕದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 4): ಕೃಉಮಾಸ, ಅರಸೀಕೆರೆ – ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಗೋದಾಮು/ ಮಳಿಗೆಗಳ ಲೀವ್ & ಲೈಸೆನ್ಸ್ ಅವಧಿಯನ್ನು ಮುಂದುವರೆಸುವ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೃಉಮಾಸ, ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದ ಗೋದಾಮು/ ಮಳಿಗೆಗಳನ್ನು ಲೀವ್ & ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ವರ್ತಕರುಗಳಿಗೆ ಹಂಚಿಕೆ ಮಾಡಿಕೊಟ್ಟಿದ್ದು ಸದರಿ ಹಂಚಿಕೆ ಅವಧಿ ಮುಕ್ತಾಯಗೊಂಡ ನಂತರ ನವೀಕರಿಸಿಕೊಂಡಿರುವುದಿಲ್ಲ ಹಾಗೂ ಸದರಿ ವರ್ತಕರುಗಳೇ ಮುಂದುವರೆದಿರುತ್ತಾರೆ. ಅಲ್ಲದೇ ಪ್ರಥಮ ಹಂಚಿಕೆಯ ಸಮಯದಲ್ಲಿ ನಿಗದಿಪಡಿಸಿದ್ದ ಲೀವ್ & ಲೈಸೆನ್ಸ್ ಶುಲ್ಕವನ್ನೇ ವಸೂಲಿ ಮಾಡಲಾಗುತ್ತಿದ್ದು, ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಶುಲ್ಕದ ಪರಿಷ್ಕರಣೆ ಆಗಿರುವುದಿಲ್ಲ. ಈ ಸಂಬಂಧ ಪ್ರಸ್ತುತ ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಪರಿಷ್ಕರಿಸಿಕೊಳ್ಳುವ ಕುರಿತಂತೆ ಪ್ರಥಮ ಹಂಚಿಕೆಯಾದ ದಿನಾಂಕದಿಂದ ಮತ್ತು ಅವಧಿಯಿಂದ ಈವರೆಗಿನ ಅಂದರೆ 31/08/2020 ರ ಅಂತ್ಯದ ಅವಧಿಯವರೆಗೆ ಪ್ರತಿ 33 ತಿಂಗಳಿಗೆ ಹಾಗೂ ನಂತರದ 22 ತಿಂಗಳಿಗೆ ಶೇ. 5 ರಂತೆ ಲೀವ್ & ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸಿ ಪುನರ್‌ನಿಗದಿಪಡಿಸಿಕೊಳ್ಳಲಾಗಿರುತ್ತದೆ. ಹಾಗೂ ಹೀಗೆ ನಿಗದಿಪಡಿಸಕೊಂಡಾಗ ಆದ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಹಂಚಿಕೆದಾರರಿಂದ ವಸೂಲಿ

ಮಾಡಲಾಗಿರುತ್ತದೆ. ಸದರಿ ಮಳಿಗೆಗಳಲ್ಲಿ ಇರುವ ಹಂಚಿಕೆದಾರರು ಹಂಚಿಕೆಯನ್ನು ಮುಂದುವರೆಸಲು ಕೋರಿರುವುದರಿಂದ ಲೀವ್ & ಲೈಸೆನ್ಸ್ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಿ **ದಿನಾಂಕ 01/09/2020 ರಿಂದ ಮುಂದಿನ 55 ತಿಂಗಳಿಗೆ ಲೀವ್ & ಲೈಸೆನ್ಸ್ ಆಧಾರದ ಮೇಲೆ ಈ ಕೆಳಕಂಡಂತೆ ಹಂಚಿಕೆ ಮಾಡಲು ಮಾನ್ಯ ನಿರ್ದೇಶಕರ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.**

| ಕ್ರ ಸಂ | ಲೀವ್ & ಲೈಸೆನ್ಸ್ ದಾರರ ವಿಳಾಸ | ಮು.ಮಾ. ಪ್ರಾಂಗಣದ ಗೋದಾಮು/ ಮಳಿಗೆ ಸಂಖ್ಯೆ | ಪ್ರಥಮ ಹಂಚಿಕೆಯಾದ ದಿನಾಂಕ/ ಅವಧಿ | ಪ್ರಥಮವಾಗಿ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ ರೂ. | ಪ್ರಸ್ತುತ ಪುನರ್ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ |
|---|---|---|---|---|---|
| 1 | ಬಾಲಾಜಿ ಆಯಿಲ್ ಮಿಲ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಇ–ಬ್ಲಾಕ್, ಅರಸೀಕೆರೆ | ಗೋದಾಮು ಸಂ. 21 | 01/01/2010 ರಿಂದ 55 ತಿಂಗಳು | 670/– | 897/– |
| 2 | ಮಲ್ಲಿಕಾರ್ಜುನ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ–ಬ್ಲಾಕ್ ಸಂ. 24 | 01/01/2010 ರಿಂದ 55 ತಿಂಗಳು | 670/– | 897/– |
| 3 | ಎಂ.ಜಿ. ಇಂದ್ರೇಶ್ ವೀರಭದ್ರೇಶ್ವರ ಟ್ರೇಡರ್ಸ್ ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ | ಇ–ಬ್ಲಾಕ್ ಸಂ. 25 | 01/08/2008 ರಿಂದ 55 ತಿಂಗಳು | 520/– | 731/– |
| 4 | ಬಿ. ಚನ್ನವೀರಪ್ಪ & ಸನ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ–ಬ್ಲಾಕ್, ಸಂ. 28 | 01/01/2010 ರಿಂದ 55 ತಿಂಗಳು | 520/– | 696/– |
| 5 | ಹೆಚ್.ಎನ್. ನಿವೇದಿತ, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ–ಬ್ಲಾಕ್, ಸಂ. 29 | 01/07/2012 ರಿಂದ 55 ತಿಂಗಳು | 830/– | 1058/– |
| 6 | ಭ್ರಮರಾಂಭ ಸ್ಟೋರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ–ಬ್ಲಾಕ್, ಸಂ. 30 | 01/07/2012 ರಿಂದ 55 ತಿಂಗಳು | 830/– | 1058/– |
| 7 | ಮಂಜುನಾಥ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಪೂ.ದಿ. ಮಳಿಗೆ–1 | 01/07/2012 ರಿಂದ 55 ತಿಂಗಳು | 793/– | 1011/– |
| 8 | ಭರತ್ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಸಿ–ಬ್ಲಾಕ್, ಗೋ–1 | 01/08/2009 ರಿಂದ 55 ತಿಂಗಳು | 3005/– | 4019/– |
| 9 | ಕೆ.ಬಿ.ಎನ್. ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಸಿ–ಬ್ಲಾಕ್, ಗೋ–2 | 01/09/2009 ರಿಂದ 55 ತಿಂಗಳು | 3005/– | 4019/– |
| 10 | ಸಿದ್ಧಿವಿನಾಯಕ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಎ–ಬ್ಲಾಕ್, ಗೋ–4 | 01/04/2010 ರಿಂದ 55 ತಿಂಗಳು | 1500/– | 2007/– |
| 11 | ಕಿಸಾನ್ ಬ್ರೂಮ್ಸ್ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಬಿ–ಬ್ಲಾಕ್, ಹ.ಪ.ಗೋ–3 | 01/04/2010 ರಿಂದ 55 ತಿಂಗಳು | 835/– | 1117/– |
| 12 | ಎನ್.ಜೆ. ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ–ಬ್ಲಾಕ್, ಮಳಿಗೆ–31 | 01/04/2010 ರಿಂದ 55 ತಿಂಗಳು | 790/– | 1058/– |
| 13 | ಜಿ.ಎಂ. ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಸಿ–ಬ್ಲಾಕ್, ಮಳಿಗೆ–7 | 01/10/2010 ರಿಂದ 55 ತಿಂಗಳು | 805/– | 1076/– |
| 14 | ಶ್ರೀ ವೆಂಕಟೇಶ್ವರ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಎ–ಬ್ಲಾಕ್, ಗೋ–3 | 01/02/2011 ರಿಂದ 55 ತಿಂಗಳು | 1500/– | 2007/– |

| | | | | | |
|---|---|---|---|---|---|
| 15 | ಶ್ರೀ ಸಾಯಿ ತಿರುಮಲ ಕಮರ್ಷಿಯಲ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಪೂ.ದಿ. ಮಳಿಗೆ-2 | 01/02/2011 ರಿಂದ 55 ತಿಂಗಳು | 755/- | 1011/- |
| 16 | ಶ್ರೀ ಮೆಳೆಯಮ್ಮ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಪೂ.ದಿ. ಮಳಿಗೆ-4 | 01/02/2011 ರಿಂದ 55 ತಿಂಗಳು | 755/- | 1011/- |
| 17 | ಶ್ರೀ ಗಣೇಶ್ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಬಿ-ಬ್ಲಾಕ್, ಹ.ಪ.ಗೋ-1 | 01/07/2011 ರಿಂದ 55 ತಿಂಗಳು | 835/- | 1117/- |
| 18 | ಪವನ್ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಬಿ-ಬ್ಲಾಕ್, ಹ.ಪ.ಗೋ-2 | 01/07/2011 ರಿಂದ 55 ತಿಂಗಳು | 835/- | 1117/- |
| 19 | ಪೂಜಾ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಇ-ಬ್ಲಾಕ್, ಹ.ಪ.ಗೋ-32 | 01/07/2011 ರಿಂದ 55 ತಿಂಗಳು | 790/- | 1058/- |
| 20 | ಶ್ರೀ ಬಸವೇಶ್ವರ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಪೂ.ದಿ. ಮಳಿಗೆ-3 | 01/07/2011 ರಿಂದ 55 ತಿಂಗಳು | 755/- | 1011/- |
| 21 | ಶ್ರೀ ಹೆಚ್.ಎನ್. ಜಯಪ್ಪ, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ವೇ-ಬ್ರಿಡ್ಜ್ | 01/09/2015 ರಿಂದ 55 ತಿಂಗಳು | 1072/- | 4851/- |
| 22 | ಮೆ॥ ವೆಂಕಟೇಶ್ವರ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಡಿ-ಬ್ಲಾಕ್ ಸಣ್ಣ ಮಳಿಗೆ ಸಂ. 3/1 | 01/02/2016 ರಿಂದ 55 ತಿಂಗಳು | 2621/- | 3179/- |
| 23 | ಮೆ॥ ಬಿ.ವಿ.ಎಸ್. ಟ್ರೇಡಿಂಗ್ ಕೊ., ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಡಿ-ಬ್ಲಾಕ್, ಸಣ್ಣ ಮಳಿಗೆ ಸಂ. 3/2 | 01/02/2016 ರಿಂದ 55 ತಿಂಗಳು | 2230/- | 2706/- |
| 24 | ಶ್ರೀ ರಾಮೇಶ್ವರ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಡಿ-ಬ್ಲಾಕ್, ಸಣ್ಣ ಮಳಿಗೆ ಸಂ. 3/3 | 01/02/2016 ರಿಂದ 55 ತಿಂಗಳು | 1837/- | 2229/- |
| 25 | ಎಸ್.ಎಫ್.ಡಿ.ಎ. ಗೋದಾಮು, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಎ-ಬ್ಲಾಕ್ | 01/07/2013 ರಿಂದ 55 ತಿಂಗಳು | 6057/- | 25727/- |
| 26 | ಕರ್ನಾಟಕ ಗ್ರಾಮೀಣ ಬ್ಯಾಂಕ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | ಟೆಂಡರ್ ಹಾಲ್ ಹಿಂಭಾಗ ಗೋದಾಮು ಸಂಖ್ಯೆ 3 | 01/04/2015 ರಿಂದ 55 ತಿಂಗಳು | 6040/- | 7325/- |
| 27 | ಸಪ್ತಗಿರಿ ಆಯಿಲ್ ಟ್ರೇಡರ್ಸ್, ಮುಖ್ಯ ಮಾರುಕಟ್ಟೆ ಪ್ರಾಂಗಣ, ಅರಸೀಕೆರೆ. | 6/1, ಬಿ-ಬ್ಲಾಕ್ | 01/05/2016 ರಿಂದ 55 ತಿಂಗಳು | 7444/- | 9027/- |

***ವಿಷಯ 5): ಕೃಉಮಾಸ, ಅರಸೀಕೆರೆ – ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಗೋದಾಮು/ ಮಳಿಗೆಗಳ ಲೀವ್ & ಲೈಸೆನ್ಸ್ ಅವಧಿಯನ್ನು ಮುಂದುವರೆಸುವ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೃಉಮಾಸ, ಅರಸೀಕೆರೆ – ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣದ ಗೋದಾಮು/ ಮಳಿಗೆಗಳನ್ನು ಲೀವ್ & ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ವರ್ತಕರುಗಳಿಗೆ ಹಂಚಿಕೆ ಮಾಡಿಕೊಟ್ಟಿದ್ದು ಸದರಿ ಹಂಚಿಕೆ ಅವಧಿ ಮುಕ್ತಾಯಗೊಂಡ ನಂತರ ನವೀಕರಿಸಿಕೊಂಡಿರುವುದಿಲ್ಲ ಹಾಗೂ ಸದರಿ ವರ್ತಕರುಗಳೇ ಮುಂದುವರೆದಿರುತ್ತಾರೆ. ಅಲ್ಲದೇ ಪ್ರಥಮ ಹಂಚಿಕೆಯ ಸಮಯದಲ್ಲಿ ನಿಗದಿಪಡಿಸಿದ್ದ ಲೀವ್ & ಲೈಸೆನ್ಸ್ ಶುಲ್ಕವನ್ನೇ ವಸೂಲಿ ಮಾಡಲಾಗುತ್ತಿದ್ದು, ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಶುಲ್ಕದ ಪರಿಷ್ಕರಣೆ ಆಗಿರುವುದಿಲ್ಲ. ಈ ಸಂಬಂಧ ಪ್ರಸ್ತುತ ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಪರಿಷ್ಕರಿಸಿಕೊಳ್ಳುವ ಕುರಿತಂತೆ ಪ್ರಥಮ ಹಂಚಿಕೆಯಾದ ದಿನಾಂಕದಿಂದ ಮತ್ತು ಅವಧಿಯಿಂದ

ಈವರೆಗಿನ ಅಂದರೆ 31/08/2020 ರ ಅಂತ್ಯದ ಅವಧಿಯವರೆಗೆ ಪ್ರತಿ 33 ತಿಂಗಳಿಗೆ ಹಾಗೂ ನಂತರದ 22 ತಿಂಗಳಿಗೆ ಶೇ. 5 ರಂತೆ ಲೀವ್ & ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸಿ ಪುನರ್ ನಿಗದಿಪಡಿಸಿಕೊಳ್ಳಲಾಗಿರುತ್ತದೆ. ಹಾಗೂ ಹೀಗೆ ನಿಗದಿಪಡಿಸಕೊಂಡಾಗ ಆದ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಹಂಚಿಕೆದಾರರಿಂದ ವಸೂಲಿ ಮಾಡಲಾಗಿರುತ್ತದೆ. ಸದರಿ ಮಳಿಗೆಗಳಲ್ಲಿ ಇರುವ ಹಂಚಿಕೆದಾರರು ಹಂಚಿಕೆಯನ್ನು ಮುಂದುವರೆಸಲು ಕೋರಿರುವುದರಿಂದ ಲೀವ್ & ಲೈಸೆನ್ಸ್ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಿ **ದಿನಾಂಕ 01/09/2020 ರಿಂದ ಮುಂದಿನ 55 ತಿಂಗಳಿಗೆ ಲೀವ್ & ಲೈಸೆನ್ಸ್ ಆಧಾರದ ಮೇಲೆ ಈ ಕೆಳಕಂಡಂತೆ ಹಂಚಿಕೆ ಮಾಡಲು ಮಾನ್ಯ ನಿರ್ದೇಶಕರ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.**

| ಕ್ರ ಸಂ. | ಲೀವ್ & ಲೈಸೆನ್ಸ್ ದಾರರ ವಿಳಾಸ | ಮು.ಮಾ. ಪ್ರಾಂಗಣದ ಗೋದಾಮು/ ಮಳಿಗೆ ಸಂಖ್ಯೆ | ಪ್ರಥಮ ಹಂಚಿಕೆಯಾದ ದಿನಾಂಕ/ ಅವಧಿ | ಪ್ರಥಮವಾಗಿ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ ರೂ. | ಪುನರ್ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ |
|---|---|---|---|---|---|
| 1 | ಜೆ.ಎನ್. ನಾಗರಾಜು, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | NGRG ಗೋದಾಮು-7 | 01/08/2008 ರಿಂದ 55 ತಿಂಗಳು | 865/- | 1216/- |
| 2 | ಡಿ. ದೇವಲ ಶೆಟ್ಟಿ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | NGRG ಗೋದಾಮು-8 | 01/10/2010 ರಿಂದ 55 ತಿಂಗಳು | 908/- | 1216/- |
| 3 | ಕೆ. ಅಚ್ಯುತ ಪೈ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಸ್ಟೋರೇಜ್ ಗೋ.-11 | 01/10/2010 ರಿಂ 55 ತಿಂಗಳು | 1145/- | 1530/- |
| 4 | ಮಾರುತಿ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ-10 | 01/12/2007 ರಿಂದ 55 ತಿಂಗಳು | 1080/- | 1518/- |
| 5 | ಮಂಜುನಾಥ ಟ್ರೇಡರ್ಸ್ ಕೆ.ಹೆಚ್. ಹನುಮಂತ ಶೆಟ್ಟಿ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ-8 | 01/12/2007 ರಿಂದ 55 ತಿಂಗಳು | 601/- | 845/- |
| 6 | ಜೆ.ಎಲ್. ಮಂಜುನಾಥ, ಶ್ರೀ ರಂಗನಾಥ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ.-7 | 01/08/2008 ರಿಂದ 55 ತಿಂಗಳು | 601/- | 845/- |
| 7 | ಕೆ.ಎನ್. ತಿಮ್ಮ ಶೆಟ್ಟಿ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಅ. ಮಳಿಗೆ-1 | 01/10/2010 ರಿಂದ 55 ತಿಂಗಳು | 619/- | 828/- |
| 8 | ಪುಷ್ಪಗಿರಿ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಅ. ಮಳಿಗೆ-4 | 01/10/2010 ರಿಂದ 55 ತಿಂಗಳು | 619/- | 828/- |
| 9 | ಕೆ. ಅಚ್ಯುತ ಪೈ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ-12 | 01/10/2010 ರಿಂದ 55 ತಿಂಗಳು | 631/- | 845/- |
| 10 | ಜೆ.ಕೆ. ಪ್ರಕಾಶ್, ಅನ್ನಪೂರ್ಣೇಶ್ವರಿ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ.-2 | 01/10/2010 ರಿಂದ 55 ತಿಂಗಳು | 1134/- | 1518/- |
| 11 | ಜೆ.ವಿ. ಗುರುಮೂರ್ತಿ ಶೆಟ್ಟಿ, ಶ್ರೀ ಬಾಲಾಜಿ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ.-4 | 01/10/2010 ರಿಂದ 55 ತಿಂಗಳು | 1134/- | 1530/- |

| | | | | | |
|---|---|---|---|---|---|
| 12 | ಜೆ.ಪಿ. ವೆಂಕಟೇಶ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಅ. ಮಳಿಗೆ-10 | 01/10/2010 ರಿಂದ 55 ತಿಂಗಳು | 845/- | 1130/- |
| 13 | ಜೆ.ಟಿ. ಸತ್ಯನಾರಾಯಣ ಶೆಟ್ಟಿ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | 100 ಎಂ.ಟಿ.-16 | 01/08/2008 ರಿಂದ 55 ತಿಂಗಳು | 2790/- | 3919/- |
| 14 | ಕೆ.ಟಿ. ಕುಮಾರಪ್ಪ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಅ. ಮಳಿಗೆ-7 | 01/08/2008 ರಿಂದ 55 ತಿಂಗಳು | 614/- | 822/- |
| 15 | ಜೆ.ಟಿ. ತಿಮ್ಮಶೆಟ್ಟಿ, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹಪಗೋ-11 | 01/08/2008 ರಿಂದ 55 ತಿಂಗಳು | 601/- | 845/- |
| 16 | ಹೆಚ್.ಎಸ್.ಕೆ. ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ, ಸಬಾ-05 | 01/08/2009 ರಿಂದ 55 ತಿಂಗಳು | 1080/- | 1446/- |
| 17 | ಹೆಚ್.ಎಸ್.ಕೆ. ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಹ.ಪ.ಗೋ, ಸಬಾ-06 | 01/08/2009 ರಿಂದ 55 ತಿಂಗಳು | 1080/- | 1446/- |
| 18 | ಜೆ.ಟಿ. ಹರೀಶ್ (ಲಕ್ಷ್ಮೀ ರಂಗನಾಥ ಸ್ವಾಮಿ ಟ್ರೇಡರ್ಸ್), ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | 100 ಎಂ.ಟಿ.-18 | 01/04/2010 ರಿಂದ 55 ತಿಂಗಳು | 2860/- | 3825/- |
| 19 | ಶ್ರೀ ಲಕ್ಷ್ಮೀವೆಂಕಟೇಶ್ವರ ಟ್ರೇಡರ್ಸ್ (ಎಸ್. ಎಂ. ರವಿ), ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | 100 ಎಂ.ಟಿ.-19 | 01/03/2011 ರಿಂದ 55 ತಿಂಗಳು | 2860/- | 3825/- |
| 20 | ಜೆ.ಪಿ. ವೆಂಕಟೇಶ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | 100 ಎಂ.ಟಿ.-20 | 01/04/2011 ರಿಂದ 55 ತಿಂಗಳು | 2860/- | 3825/- |
| 21 | ಸಿಂಚನಾ ಟ್ರೇಡರ್ಸ್, ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | ಅ. ಮಳಿಗೆ-11 | 01/04/2011 ರಿಂದ 55 ತಿಂಗಳು | 805/- | 1076/- |
| 22 | ಶ್ರೀ ಲಕ್ಷ್ಮೀವೆಂಕಟೇಶ್ವರ ಟ್ರೇಡರ್ಸ್ (ಜೆ.ಟಿ. ಮುಕುಂದ ಶೆಟ್ಟಿ), ಜಾವಗಲ್ ಉಪ ಮಾರುಕಟ್ಟೆ ಪ್ರಾಂಗಣ | 100 ಎಂ.ಟಿ.-21 | 15/08/2011 ರಿಂದ 55 ತಿಂಗಳು | 2860/- | 3825/- |

*ವಿಷಯ 6):* ***ಕೃಉಮಾಸ, ಅರಸೀಕೆರೆ - ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಗೋದಾಮು/ ಮಳಿಗೆಗಳ ಲೀವ್ & ಲೈಸೆನ್ಸ್ ಅವಧಿಯನ್ನು ಮುಂದುವರೆಸುವ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೃಉಮಾಸ, ಅರಸೀಕೆರೆ - ಜೆ.ಸಿ. ಪುರ, ಉಪ ಮಾರುಕಟ್ಟೆ ಪ್ರಾಂಗಣದ ಗೋದಾಮು/ ಮಳಿಗೆಗಳನ್ನು ಲೀವ್ & ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ವರ್ತಕರುಗಳಿಗೆ ಹಂಚಿಕೆ ಮಾಡಿಕೊಟ್ಟಿದ್ದು ಸದರಿ ಹಂಚಿಕೆ ಅವಧಿ ಮುಕ್ತಾಯಗೊಂಡ ನಂತರ ನವೀಕರಿಸಿಕೊಂಡಿರುವುದಿಲ್ಲ ಹಾಗೂ ಸದರಿ ವರ್ತಕರುಗಳೇ ಮುಂದುವರೆದಿರುತ್ತಾರೆ. ಅಲ್ಲದೇ ಪ್ರಥಮ ಹಂಚಿಕೆಯ ಸಮಯದಲ್ಲಿ ನಿಗದಿಪಡಿಸಿದ್ದ ಲೀವ್ & ಲೈಸೆನ್ಸ್ ಶುಲ್ಕವನ್ನೇ ವಸೂಲಿ ಮಾಡಲಾಗುತ್ತಿದ್ದು, ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಶುಲ್ಕದ ಪರಿಷ್ಕರಣೆ ಆಗಿರುವುದಿಲ್ಲ. ಈ ಸಂಬಂಧ ಪ್ರಸ್ತುತ ಕಾಲಕಾಲಕ್ಕೆ ಲೀವ್ & ಲೈಸೆನ್ಸ್ ಪರಿಷ್ಕರಿಸಿಕೊಳ್ಳುವ ಕುರಿತಂತೆ ಪ್ರಥಮ ಹಂಚಿಕೆಯಾದ ದಿನಾಂಕದಿಂದ ಮತ್ತು ಅವಧಿಯಿಂದ

ಈವರೆಗಿನ ಅಂದರೆ 31/08/2020 ರ ಅಂತ್ಯದ ಅವಧಿಯವರೆಗೆ ಪ್ರತಿ 33 ತಿಂಗಳಿಗೆ ಹಾಗೂ ನಂತರದ 22 ತಿಂಗಳಿಗೆ ಶೇ. 5 ರಂತೆ ಲೀವ್ & ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸಿ ಪುನರ್ ನಿಗದಿಪಡಿಸಿಕೊಳ್ಳಲಾಗಿರುತ್ತದೆ. ಹಾಗೂ ಹೀಗೆ ನಿಗದಿಪಡಿಸಕೊಂಡಾಗ ಆದ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ವ್ಯತ್ಯಾಸದ ಮೊತ್ತವನ್ನು ಹಂಚಿಕೆದಾರರಿಂದ ವಸೂಲಿ ಮಾಡಲಾಗಿರುತ್ತದೆ. ಸದರಿ ಮಳಿಗೆಗಳಲ್ಲಿ ಇರುವ ಹಂಚಿಕೆದಾರರು ಹಂಚಿಕೆಯನ್ನು ಮುಂದುವರೆಸಲು ಕೋರಿರುವುದರಿಂದ ಲೀವ್ & ಲೈಸೆನ್ಸ್ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಿ **ದಿನಾಂಕ 01/09/2020 ರಿಂದ ಮುಂದಿನ 55 ತಿಂಗಳಿಗೆ ಲೀವ್ & ಲೈಸೆನ್ಸ್ ಆಧಾರದ ಮೇಲೆ ಈ ಕೆಳಕಂಡಂತೆ ಹಂಚಿಕೆ ಮಾಡಲು ಮಾನ್ಯ ನಿರ್ದೇಶಕರ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.**

| ಕ್ರ ಸಂ. | ಲೀವ್ & ಲೈಸೆನ್ಸ್ ದಾರರ ವಿಳಾಸ | ಮು.ಮಾ. ಪ್ರಾಂಗಣದ ಗೋದಾಮು/ ಮಳಿಗೆ ಸಂಖ್ಯೆ | ಪ್ರಥಮ ಹಂಚಿಕೆಯಾದ ದಿನಾಂಕ/ ಅವಧಿ | ಪ್ರಥಮವಾಗಿ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ ರೂ. | ಪುನರ್ ನಿಗದಿಪಡಿಸಿದ ಲೀವ್ & ಲೈಸೆನ್ಸ್ ಶುಲ್ಕ |
|---|---|---|---|---|---|
| 1 | ರಹಮಾನಿಯಾ ಟ್ರೇಡರ್ಸ್, ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣ | ಗೋದಾಮು ಸಂಖ್ಯೆ-1 | 01/07/2011 ರಿಂದ 55 ತಿಂಗಳು | 2400/- | 3209/- |
| 2 | ಜೈ ಭರತ್ ಟ್ರೆಡರ್ಸ್, ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣ | ಗೋದಾಮು ಸಂಖ್ಯೆ-2 | 01/07/2011 ರಿಂದ 55 ತಿಂಗಳು | 2400/- | 3209/- |
| 3 | ಶಹಿನಾ ಟ್ರೇಡರ್ಸ್., ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣ | ಗೋದಾಮು ಸಂಖ್ಯೆ-3 | 01/07/2011 ರಿಂದ 55 ತಿಂಗಳು | 2400/- | 3209/- |

***ವಿಷಯ 7): ರಿ.ಅ. ಸಂಖ್ಯೆ 11970-72/2019 ಶ್ರೀ ಜೆ.ಎನ್. ರಾಜಶೇಖರಪ್ಪ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದ ತೀರ್ಪು ಸಮಿತಿ ವಿರುದ್ಧ ಪ್ರಕಟಗೊಂಡಿರುವ ಹಿನ್ನಲೆಯಲ್ಲಿ ಸಮಿತಿ ಪರ ವಕೀಲರನ್ನು ನೇಮಿಸಿಕೊಂಡು ಮೇಲ್ಮನವಿ ದಾಖಲಿಸಿರುವುದನ್ನು ಸ್ಥಿರೀಕರಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 11970-72/2019 ಶ್ರೀ ಜೆ.ಎನ್. ರಾಜಶೇಖರಪ್ಪ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದ ತೀರ್ಪು ದಿನಾಂಕ 06/03/2020 ರಂದು ಸಮಿತಿಯ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಪ್ರಕಟಗೊಂಡಿದ್ದು ಸಮಿತಿ ವತಿಯಿಂದ ಸಕಾಲಿಕ ಕ್ರಮ ಕೈಗೊಂಡು ಸಮಿತಿ ಪರ ಹೈಕೋರ್ಟ್ ವಕೀಲರಾದ ಶ್ರೀ ಟಿ. ಸ್ವರೂಪ್, ಹೈಕೋರ್ಟ್ ವಕೀಲರು, ಬೆಂಗಳೂರು ಇವರನ್ನು ಸಮಿತಿ ಪರ ವಕೀಲರನ್ನಾಗಿ ನೇಮಿಸಿಕೊಂಡು ಸದರಿ ತೀರ್ಪಿನ ವಿರುದ್ಧ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಮಿತಿ ಪರವಾಗಿ ನ್ಯಾಯಾಲಯಕ್ಕೆ ವಕಾಲತ್ ಸಲ್ಲಿಸಿ ಪ್ರಕರಣವನ್ನು ಮುನ್ನಡೆಸಿರುವುದನ್ನು ಒಪ್ಪಲಾಯಿತು ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಯನ್ವಯ ನಿಯಮಾನುಸಾರ ಸಮಿತಿ ಪರ ವಕೀಲರಿಗೆ ಕಾನೂನು ಶುಲ್ಕವನ್ನು ಪಾವತಿಸಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 8): ಸಿ.ಸಿ. ಸಂಖ್ಯೆ 1371/2007 ಮೆ|| ಸಾಯಿ ಟ್ರೇಡರ್ಸ್, ಎ.ಪಿ.ಎಂ.ಸಿ. ಯಾರ್ಡ್, ಅರಸೀಕೆರೆ ವಿರುದ್ಧ ಎ.ಪಿ.ಎಂ.ಸಿ., ಅರಸೀಕೆರೆ ಪ್ರಕರಣದ ತೀರ್ಪು ಸಮಿತಿ ವಿರುದ್ಧ ಪ್ರಕಟಗೊಂಡಿರುವ ಹಿನ್ನಲೆಯಲ್ಲಿ ಸಮಿತಿ ಪರ ವಕೀಲರನ್ನು ನೇಮಿಸಿಕೊಂಡು ಮೇಲ್ಮನವಿ ದಾಖಲಿಸಿರುವುದನ್ನು ಸ್ಥಿರೀಕರಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಅರಸೀಕೆರೆ ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ಮೆ॥ ಸಾಯಿ ಟ್ರೇಡರ್ಸ್, ಎ.ಪಿ.ಎಂ.ಸಿ. ಯಾರ್ಡ್, ಅರಸೀಕೆರೆ ವಿರುದ್ಧ ಎ.ಪಿ.ಎಂ.ಸಿ, ಅರಸೀಕೆರೆ ಸಿ.ಸಿ. ಸಂಖ್ಯೆ 1371/207 ರ ತೀರ್ಪು ದಿನಾಂಕ 26/06/2019 ರಂದು ಸಮಿತಿ ವಿರುದ್ಧವಾಗಿ ಪ್ರಕಟಗೊಂಡಿರುತ್ತದೆ. ಸದರಿ ತೀರ್ಪಿನ ವಿರುದ್ಧ ಕ್ರಿಮಿನಲ್ ಅಪೀಲು ಸಂಖ್ಯೆ 1455/2019 ರನ್ವಯ ಮೇಲ್ಮನವಿ (ಅಪೀಲು) ಯನ್ನು ದಾಖಲಿಸಿ ಪ್ರಕರಣವನ್ನು ಮುನ್ನಡೆಸಿರುವುದನ್ನು ಒಪ್ಪಲಾಯಿತು. ಹಾಗೂ ಸಮಿತಿ ವತಿಯಿಂದ ಸಕಾಲಿಕ ಕ್ರಮ ಕೈಗೊಂಡು ಸಮಿತಿ ಪರ ಹೈಕೋರ್ಟ್ ವಕೀಲರಾದ ಶ್ರೀ ಟಿ. ಸ್ವರೂಪ್, ಹೈಕೋರ್ಟ್ ವಕೀಲರು, ಬೆಂಗಳೂರು ಇವರನ್ನು ಸಮಿತಿ ಪರ ವಕೀಲರನ್ನಾಗಿ ನೇಮಿಸಿಕೊಂಡು ಸದರಿ ತೀರ್ಪಿನ ವಿರುದ್ಧ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಮಿತಿ ಪರವಾಗಿ ನ್ಯಾಯಾಲಯಕ್ಕೆ ವಕಾಲತ್ ಸಲ್ಲಿಸಿ ಪ್ರಕರಣವನ್ನು ಮುನ್ನಡೆಸಿರುವುದನ್ನು ಒಪ್ಪಲಾಯಿತು ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಯನ್ವಯ ನಿಯಮಾನುಸಾರ ಸಮಿತಿ ಪರ ವಕೀಲರಿಗೆ ಕಾನೂನು ಶುಲ್ಕವನ್ನು ಪಾವತಿಸಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 9): ಕೃಉಮಾಸ, ಅರಸೀಕೆರೆ – 2020-21 ನೇ ಸಾಲಿಗೆ ಹಮಾಲರ/ ತೂಕದವರ ಲೈಸೆನ್ಸ್ ನವೀಕರಣ ಮತ್ತು ಹೊಸದಾಗಿ ಹಮಾಲರ ಲೈಸೆನ್ಸ್ ಮಂಜೂರಾತಿ ಮಾಡುವ ವಿಚಾರ.***

ತೀರ್ಮಾನ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ ಮುಖ್ಯ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ 2020-21 ನೇ ಸಾಲಿಗೆ 464 ಜನ ಹಮಾಲರು ಮತ್ತು 49 ಜನ ತೂಕದವರು ಒಟ್ಟು 513 ಜನ ಹಮಾಲರು/ ತೂಕದವರ ಲೈಸೆನ್ಸ್‌ನ್ನು ನವೀಕರಿಸಲಾಯಿತು. ಪ್ರಸ್ತುತ ಕೇಂದ್ರ ಸರ್ಕಾರದ ಆಧ್ಯಾದೇಶ ಹಾಗೂ ರಾಜ್ಯ ಸರ್ಕಾರದ ಸುಗ್ರೀವಾಜ್ಞೆ ಹಿನ್ನಲೆಯಲ್ಲಿ ಮಾರುಕಟ್ಟೆ ವ್ಯಾಪಾರ ವಹಿವಾಟು ಇಳಿಮುಖವಾಗಿದ್ದು ಇಂತಹ ಸಂದರ್ಭದಲ್ಲಿ ಹೊಸದಾಗಿ ಲೈಸೆನ್ಸ್ ನೀಡಿಕೆ ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಸಭೆಯು ಹೊಸದಾಗಿ ಲೈಸೆನ್ಸ್ ಮಂಜೂರಾತಿಯನ್ನು ನಿರಾಕರಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 10): ಸಮಿತಿಯು ವಿವಿಧ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದು ಯಾವುದೇ ಆರ್ಥಿಕ ವ್ಯವಹಾರ ನಡೆಸದಿರುವ ಕಾರಣ ಉಳಿತಾಯ ಖಾತೆಯನ್ನು ನಿಷ್ಕ್ರಿಯಗೊಳಿಸುವ ಬಗ್ಗೆ ಚರ್ಚಿಸುವ ವಿಚಾರ.***

ತೀರ್ಮಾನ: ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ತನ್ನ ಆರ್ಥಿಕ ವ್ಯವಹಾರಗಳ ನಿರ್ವಹಣೆಗಾಗಿ ಈ ಹಿಂದೆ ಮುಖ್ಯ ಮಾರುಕಟ್ಟೆ ಮತ್ತು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರತ್ಯೇಕ ಉಳಿತಾಯ ಖಾತೆಗಳೊಂದಿಗೆ ಹೆಚ್ಚುವರಿ ಖಾತೆಗಳನ್ನು ಹೊಂದಿ ಪ್ರಸ್ತುತ 15 ಉಳಿತಾಯ ಖಾತೆಗಳನ್ನು ಹೊಂದಲಾಗಿರುತ್ತದೆ. ಸಮಿತಿಯು ತನ್ನ ಆರ್ಥಿಕ ವ್ಯವಹಾರಗಳನ್ನು ಸೀಮಿತ ಬ್ಯಾಂಕುಗಳಲ್ಲಿ ನಡೆಸುತ್ತಿದ್ದು ಉಳಿದ ಬ್ಯಾಂಕುಗಳಲ್ಲಿ ಯಾವುದೇ ಆರ್ಥಿಕ ವ್ಯವಹಾರವನ್ನು ನಡೆಸದಿರುವ ಕಾರಣ ಸದರಿ ಬ್ಯಾಂಕುಗಳಲ್ಲಿನ ನಗದು ಶಿಲ್ಕು ನಿರ್ಲಿಪ್ತವಾಗಿರುತ್ತದೆ ಹಾಗೂ ಸದರಿ ಉಳಿತಾಯ ಖಾತೆಗಳ ನಿರ್ವಹಣೆಯು ಸಮಿತಿಯ ಕಾರ್ಯಭಾರವನ್ನು ಹೆಚ್ಚು ಮಾಡಿರುವ ವಿಷಯವನ್ನು ಸಮಿತಿಯ ಗಮನಕ್ಕೆ ತರಲಾಯಿತು. ವಿವರ ಈ ಕೆಳಕಂಡಂತಿರುತ್ತದೆ.

**ಸಮಿತಿಯು ಆರ್ಥಿಕ ವ್ಯವಹಾರ ನಡೆಸದಿರುವ ಬ್ಯಾಂಕುಗಳ ವಿವರ**

| ಕ್ರ.ಸಂ. | ಬ್ಯಾಂಕಿನ ಹೆಸರು/ ಶಾಖೆ | ಆಗಸ್ಟ್ 2020 ರ ಅಂತ್ಯಕ್ಕೆ ಶಿಲ್ಕು |
|---|---|---|
| 1 | ಕೆನರಾ ಬ್ಯಾಂಕ್, ಅರಸೀಕೆರೆ ಶಾಖೆ | ರೂ. 7,474/- |
| 2 | ವಿಜಯ ಬ್ಯಾಂಕ್, ಜಾವಗಲ್ ಶಾಖೆ | ರೂ. 3,351/- |
| 3 | ವಿಜಯ ಬ್ಯಾಂಕ್, ಅರಸೀಕೆರೆ ಶಾಖೆ | ರೂ. 12,300/- |
| 4 | ಸಿಂಡಿಕೇಟ್ ಬ್ಯಾಂಕ್, ಬಾಣಾವರ ಶಾಖೆ | ರೂ. 7,644/- |
| 5 | ಆಕ್ಸಿಸ್ ಬ್ಯಾಂಕ್, ಅರಸೀಕೆರೆ ಶಾಖೆ | ರೂ. 41,340/- |

ವಿಷಯವನ್ನು ಪರಿಶೀಲಿಸಲಾಗಿ ಸಮಿತಿಯು ತನ್ನ ಆರ್ಥಿಕ ವ್ಯವಹಾರಗಳಿಗೆ ಅನುಕೂಲವಾಗುವಂತೆ ಅಗತ್ಯ ಉಳಿತಾಯ ಖಾತೆಯನ್ನು ಮಾತ್ರ ಉಳಿಸಿಕೊಂಡು ಯಾವುದೇ ವ್ಯವಹಾರ ನಡೆಸದಿರುವ (Inoperative) ಬ್ಯಾಂಕಿನ ಉಳಿತಾಯ ಖಾತೆಯನ್ನು ಮುಚ್ಚುವಂತೆ ಹಾಗೂ ಸದರಿ ಉಳಿತಾಯ ಖಾತೆಯಲ್ಲಿನ ಶಿಲ್ಕನ್ನು ಸಮಿತಿಯ ಬ್ಯಾಂಕ್ ಖಾತೆಗೆ ಜಮಾ ಮಾಡಲು ಅಗತ್ಯ ಕ್ರಮವಹಿಸತಕ್ಕದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 11): ಸಹಾಯಕ ನಿರ್ದೇಶಕರು, ಪಶು ವೈದ್ಯ ಇಲಾಖೆ, ಅರಸೀಕೆರೆ ಇವರು ಬಾಣಾವರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ತಾತ್ಕಾಲಿಕವಾಗಿ ಪಶು ವೈದ್ಯ ಶಾಲೆ ಕಛೇರಿ ತೆರೆಯಲು ಅನುಮತಿ ಕೋರಿ ಸಲ್ಲಿಸಿರುವ ಮನವಿ ಪತ್ರವನ್ನು ಪರಿಶೀಲಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಪಶು ವೈದ್ಯ ಇಲಾಖೆ, ಅರಸೀಕೆರೆ ಇವರು ಪಶು ಚಿಕಿತ್ಸಾಲಯಕ್ಕೆ ಆರ್.ಐ.ಡಿ.ಎಫ್. ಟ್ರಾಂಚ್ –24 (ಹೆಚ್ಚುವರಿ) ಯೋಜನೆಯಡಿಯಲ್ಲಿ ಬಾಣಾವರ ಪಶು ಚಿಕಿತ್ಸಾಲಯ ನೂತನ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು ಹಾಲಿ ಬಾಣಾವರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶು ಚಿಕಿತ್ಸಾಲಯವನ್ನು ತೆರವುಗೊಳಿಸಿ ಕಟ್ಟಡ ನಿರ್ಮಾಣ ಮಾಡಲು ಅವಕಾಶಿಸಬೇಕಾದ ಕಾರಣ ಎ.ಪಿ.ಎಂ.ಸಿ., ಬಾಣಾವರ ಕಛೇರಿ ಕಟ್ಟಡವನ್ನು ತಾತ್ಕಾಲಿಕವಾಗಿ ನೀಡುವಂತೆ ಕೋರಿದ್ದು ಇದಕ್ಕೆ ತಾಲ್ಲೂಕು ಆಡಳಿತ ವತಿಯಿಂದ ಮತ್ತು ಮಾನ್ಯ ಅರಸೀಕೆರೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀಯುತ ಕೆ.ಎಂ. ಶಿವಲಿಂಗೇಗೌಡರು ಸಮಿತಿಗೆ ಪತ್ರ ಬರೆದು ಬಾಣಾವರ ಎ.ಪಿ.ಎಂ.ಸಿ. ಕಛೇರಿಯನ್ನು 5–6 ತಿಂಗಳುಗಳ ಕಾಲ ಪಶು ಆಸ್ಪತ್ರೆಯ ದೈನಂದಿನ ಕೆಲಸ ಕಾರ್ಯಗಳಿಗೆ ನೀಡಲು ಕ್ರಮವಹಿಸುವಂತೆ ಸಮಿತಿಗೆ ಸೂಚಿಸಿರುವುದನ್ನು ಕಾರ್ಯದರ್ಶಿಯವರು ಸಮಿತಿ ಸಭೆ ಗಮನಕ್ಕೆ ತಂದರು. ಬಾಣಾವರ ಉಪ ಮಾರುಕಟ್ಟೆ ಕಛೇರಿ ಸಮಿತಿಗೆ ಅವಶ್ಯವಿದ್ದು ಪಶು ಆಸ್ಪತ್ರೆ, ಬಾಣಾವರದ ದೈನಂದಿನ ಕೆಲಸಕ್ಕಾಗಿ ತಾತ್ಕಾಲಿಕವಾಗಿ ಬಾಣಾವರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೋದಾಮು–ವ–ಕಛೇರಿಯನ್ನು ನೀಡಬಹುದೆಂದು ಸಮಿತಿಯು ಅಭಿಪ್ರಾಯಪಟ್ಟಿದ್ದಲ್ಲದೆ ಈ ಬಗ್ಗೆ ಪಶು ವೈದ್ಯ ಇಲಾಖೆಯೊಂದಿಗೆ ಪತ್ರ ವ್ಯವಹರಿಸಿ ಸಮಿತಿಯ ತೀರ್ಮಾನದಂತೆ ಅವರು ಒಪ್ಪಿದಲ್ಲಿ ಮಾತ್ರ ಬಾಣಾವರ ಪಶು ಚಿಕಿತ್ಸಾಲಯದ ದೈನಂದಿನ ಕೆಲಸಕಾರ್ಯಗಳನ್ನು ಕೈಗೊಳ್ಳಲು ಬಾಣಾವರ ಉಪ ಮಾರುಕಟ್ಟೆಯ ಶುಚಿತ್ವವನ್ನು ಕಾಪಾಡಿಕೊಳ್ಳುವುದಲ್ಲದೆ ಸೂಕ್ತ ಷರತ್ತು–ವ–ನಿಬಂಧನೆಗಳನ್ನು ವಿಧಿಸಿ ಸಮಿತಿಯ ಆಸ್ತಿ ಪಾಸ್ತಿಗೆ ದಕ್ಕೆಯಾಗದಂತೆ ಪಶು ವೈದ್ಯ ಇಲಾಖೆಯೊಂದಿಗೆ ಸೂಕ್ತ ಕರಾರು ಮಾಡಿಕೊಂಡು ಬಾಣಾವರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೋದಾಮು–ವ–ಕಛೇರಿಯನ್ನು ಬಾಣಾವರ ಪಶು ಆಸ್ಪತ್ರೆ ಕೆಲಸ ಕಾರ್ಯಗಳಿಗೆ ತಾತ್ಕಾಲಿಕವಾಗಿ ನೀಡಿ ತನ್ಮೂಲಕ ರೈತಾಪಿ ವರ್ಗದವರ ಹಿತ ಕಾಪಾಡುವುದರೊಂದಿಗೆ ಮಾನ್ಯ ಶಾಸಕರ ಸೂಚನೆಯನ್ವಯ ಕ್ರಮ ವಹಿಸತಕ್ಕದ್ದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 12): ಕೃಉಮಾಸ, ಅರಸೀಕೆರೆ – ಸಮಿತಿಗೆ ಕೃಷಿ ಹುಟ್ಟುವಳಿಗಳನ್ನು ವ್ಯವಹರಿಸಲು ಹೊಸದಾಗಿ ದಲ್ಲಾಲರ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಲೈಸೆನ್ಸ್ ಮಂಜೂರು ಮಾಡುವ ವಿಚಾರ.***

ತೀರ್ಮಾನ: ಸಮಿತಿಗೆ ಹೊಸದಾಗಿ ಲೈಸೆನ್ಸ್ ಕೋರಿ ಬಂದಿರುವ ಕೆಳಕಂಡ ಅರ್ಜಿಯನ್ನು ಪರಿಶೀಲಿಸಲಾಯಿತು.

## ಹೊಸದಾಗಿ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳು

| ಕ್ರ.ಸಂ. | ಹೆಸರು ಮತ್ತು ವಿಳಾಸ | ಲೈಸೆನ್ಸ್ ವರ್ಗ |
|---|---|---|
| 1 | ಕಲ್ಲೇಶ ಟ್ರೇಡರ್ಸ್, ಪ್ರೋ॥ ಎನ್.ಕೆ. ಮಂಜುನಾಥ, ಬಿನ್ ಎನ್.ಎಸ್. ಕಲ್ಲೇಶ, ನಂ. 137/01, ಶ್ರೀನಿವಾಸ ನಗರ, ಅರಸೀಕೆರೆ, ಹಾಸನ ಜಿಲ್ಲೆ. ಮೊ. ನಂ. 9945916658 | ದಲ್ಲಾಲರು |

ಅರಸೀಕೆರೆ ಮಾರುಕಟ್ಟೆ ಪ್ರಾಂಗಣದ ವ್ಯಾಪ್ತಿಯಲ್ಲಿ ನಿಯಂತ್ರಿತ ಕೃಷಿ ಹುಟ್ಟುವಳಿಗಳನ್ನು ವ್ಯವಹರಿಸಲು 2020-21 ರಿಂದ 2029-30 ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ದಲ್ಲಾಲರ ಪರವಾನಿಗೆಯನ್ನು ಹೊಸದಾಗಿ ಮಂಜೂರು ಮಾಡಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 13):*** ***ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೇ ವಿಷಯಗಳು.***

***ವಿಷಯ 13(1):*** ***ಕೃಉಮಾಸ, ಅರಸೀಕೆರೆ 2017-18 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆಗಳಾದ ಜಾವಗಲ್ ಮತ್ತು ಗಂಡಸಿಯಲ್ಲಿ ಕೈಗೆತ್ತಿಕೊಂಡಿರುವ 6 ಸಂಖ್ಯೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ವರ್ಕ್ ಸ್ಲಿಪ್ ಹಾಗೂ ಇ.ಐ.ಆರ್.ಎಲ್. ಪ್ರಸ್ತಾವನೆಯ ತಾಂತ್ರಿಕ ವರದಿಯನ್ನು ಮಾನ್ಯ ನಿರ್ದೇಶಕರ ದಿನಾಂಕ 11/02/2020 ರ ಸೂಚನೆಯನುಸಾರ ಮೆ॥ ಬ್ಯೂರೋ ವೆರಿಟಸ್ (ಇಂಡಿಯಾ) ಪ್ರೈ. ಲಿ., ಬೆಂಗಳೂರು ಇವರಿಂದ ಪಡೆದಿರುವ "ತಾಂತ್ರಿಕ ವರದಿ"ಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ – 2017-18 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ ಮಾರುಕಟ್ಟೆಗಳಾದ ಜಾವಗಲ್ ಮತ್ತು ಗಂಡಸಿಯಲ್ಲಿ ಕೈಗೆತ್ತಿಕೊಂಡಿರುವ 6 ಸಂಖ್ಯೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ಯಾಕೇಜ್ ಟೆಂಡರ್‌ನ್ನು ಶ್ರೀ ಹೆಚ್.ಎಸ್. ಅರುಣ್‌ಕುಮಾರ್, ಗುತ್ತಿಗೆದಾರರು ಮಂಡ್ಯ ಇವರಿಗೆ ವಹಿಸಲಾಗಿದ್ದು ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ ಮನ್ಯ ಅಧೀಕ್ಷಕ ಅಭಿಯಂತರರು, ಕೃಮಾಇ, ಬೆಂಗಳೂರು ಹಾಗೂ ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ., ಮೈಸೂರು ವಿಭಾಗ, ಮೈಸೂರು ಇವರುಗಳು ಪರಿವೀಕ್ಷಣೆ ಕೈಗೊಂಡು ಸದರಿ ಕಾಮಗಾರಿಗಳ ನಿರ್ವಹಣೆ ಬಗ್ಗೆ ಬೇಕಾಗಿರುವ ಹೆಚ್ಚುವರಿ ಐಟಂಗಳ ಪರಿಮಾಣಗಳನ್ನು ನಿರ್ವಹಿಸುವಂತೆ ಸಲಹೆ ಹಾಗೂ ಸೂಚನೆಗಳನ್ನು ನೀಡಿರುವುದರನ್ವಯ ಹೆಚ್ಚುವರಿ ಪರಿಮಾಣಗಳಿಗನುಗುಣವಾಗಿ ವರ್ಕ್‌ಸ್ಲಿಪ್ ಹಾಗೂ ಇ.ಐ.ಆರ್.ಎಲ್. ತಃಖ್ತೆಯನ್ನು ರೂ. 69,53,162=40 (ಅರವತ್ತೊಂಬತ್ತು ಲಕ್ಷದ ಐವತ್ತಮೂರು ಸಾವಿರದ ಒಂದುನೂರ ಅರವತ್ತೆರಡು ರೂಪಾಯಿ ನಲವತ್ತು ಪೈಸೆ) ಮೊತ್ತಕ್ಕೆ ತಯಾರಿಸಿ ಮಾನ್ಯ ನಿರ್ದೇಶಕರ ಮಂಜೂರಾತಿಗಾಗಿ ಸಲ್ಲಿಸಲಾಗಿದ್ದಿತು. ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ತಮ್ಮ ಪತ್ರ ದಿನಾಂಕ 11/02/2020 ರಲ್ಲಿ ಸೂಚಿಸಿದರನ್ವಯ ಸದರಿ ಕಾಮಗಾರಿಯ ಶೆಡ್ಯೂಲ್ –ಬಿ ಮತ್ತು ಹೆಚ್ಚುವರಿ ಪರಿಮಾಣಗಳನ್ನು ಮೆ॥ ಬ್ಯೂರೋ ವೆರಿಟಸ್ (ಇಂಡಿಯಾ) ಪ್ರೈ. ಲಿ., ಬೆಂಗಳೂರು ಇವರಿಂದ ತಾಂತ್ರಿಕ ವರದಿಯನ್ನು ಪಡೆದು ತಾಂತ್ರಿಕ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಮರುಸಾದರಪಡಿಸಲು ಸೂಚಿಸಿದ್ದರನ್ವಯ ಪ್ರಸ್ತುತ ಮೆ॥ ಬ್ಯೂರೋ ವೆರಿಟಸ್ (ಇಂಡಿಯಾ) ಪ್ರೈ. ಲಿ., ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ 13/08/2020 ರಲ್ಲಿ "ವಿವರವಾದ ತಾಂತ್ರಿಕ ವರದಿ" ಯನ್ನು ಸಮಿತಿಗೆ ಕಳುಹಿಸಿಕೊಟ್ಟಿದ್ದು ವಿವರ ಈ ಕೆಳಕಂಡಂತಿದೆ.

| ಕಾಮಗಾರಿಯ ವಿವರ | ಒಟ್ಟು ಮೊತ್ತ (ರೂ. ಗಳಲ್ಲಿ) |
|---|---|
| ಮೂಲ ಕಾಮಗಾರಿಗೆ ಇಡಲಾದ ಟೆಂಡರ್ ಮೊತ್ತ | 3,11,68,377.84 |
| ಅನುಮೋದಿತ ಟೆಂಡರ್ ಮೊತ್ತ | 3,39,42,509.60 |
| ಕಾಮಗಾರಿಯ ಹೆಚ್ಚಿನ ಪರಿಮಾಣಗಳೊಂದಿಗೆ ಪೂರ್ಣಗೊಳ್ಳಲು ಬೇಕಾಗುವ ಮೊತ್ತ | 4,26,67,272=49 |
| ವರ್ಕ್ ಸ್ಲಿಪ್ ಮೊತ್ತ | 60,48,543=89 |
| ಇ.ಐ.ಆರ್.ಎಲ್. ಮೊತ್ತ | 26,76,219=00 |
| ಸಂಭವನೀಯ ಉಳಿತಾಯ ಮೊತ್ತ | 4,87,163=03 |
| ಸಮಿತಿಗೆ ಒಟ್ಟು ಆರ್ಥಿಕ ಹೆಚ್ಚುವರಿ ಮೊತ್ತ | 82,37,599=86 |

ಸಮಿತಿಯು ಮೇಲ್ಕಂಡ ವಿವರಗಳನ್ನು ಕೂಲಂಕುಶವಾಗಿ ಪರಿಶೀಲಿಸಿತು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ನಿರ್ದೇಶಕರ ಸೂಚನೆಯನುಸಾರ ಮೆ॥ ಬ್ಯೂರೋ ವೆರಿಟಸ್ (ಇಂಡಿಯಾ) ಪ್ರೈ. ಲಿ., ಬೆಂಗಳೂರು ಇವರ ತಾಂತ್ರಿಕ ವರದಿಯಂತೆ ವರ್ಕ್ ಸ್ಲಿಪ್ ಹಾಗೂ ಇ.ಐ.ಆರ್.ಎಲ್. ನ ಒಟ್ಟು ಮೊತ್ತ ರೂ., 82,37,599=86 ಗಳಿಗೆ ಸಮಿತಿಯು ತನ್ನ ಒಪ್ಪಿಗೆಯನ್ನು ನೀಡಿತು. ಇದಕ್ಕೆ ಸಕ್ಷಮ ಪ್ರಾಧಿಕಾರದಿಂದ ಒಪ್ಪಿಗೆಯನ್ನು ಪಡೆದು ಕಾರ್ಯಗತಗೊಳಿಸತಕ್ಕದ್ದೆಂದು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 13(2): ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಕೃಮಾಇ/ಮುಂಪ/ವಾಹನ/21/2020-21 ದಿನಾಂಕ 03/08/2020 ಮತ್ತು ಕರ್ನಾಟಕ ಸರ್ಕಾರದ ನಡವಳಿಗಳು ಸರ್ಕಾರದ ಆದೇಶ ಸಂಖ್ಯೆ ಸಇ/306/ಎಂ.ಆರ್.ಇ/2020/ಇಅ/ ಬೆಂಗಳೂರು ದಿನಾಂಕ 04/08/2020 ರನ್ವಯ ಮಾರುಕಟ್ಟೆ ಶುಲ್ಕ ದರವನ್ನು ಶೇ. 0.35 ಕ್ಕೆ ಇಳಿಸಿ ಆದೇಶಿಸಿರುವ ಮೇರೆಗೆ ಸಮಿತಿಯ ಆದಾಯಕ್ಕನುಗುಣವಾಗಿ "ಸ್ವಚ್ಛತಾ ಸೇವೆ ಬಾಬ್ತನ್ನು ಕಡಿತಗೊಳಿಸುವ ಬಗ್ಗೆ" ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.***

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಕೇಂದ್ರ ಸರ್ಕಾರದ ಆದ್ಯಾದೇಶ ಸಂಖ್ಯೆ 10/2020 ಕರ್ನಾಟಕ ಸರ್ಕಾರದ ನಡವಳಿ ಆದೇಶ ಸಂಖ್ಯೆ ದಿನಾಂಕ: 04/08/2020 ರನ್ವಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕವನ್ನು ಇಳಿಸಿದ್ದು ಬದಲಾದ ಮಾರುಕಟ್ಟೆ ಸ್ಥಿತಿಗತಿಗಳ ಸನ್ನಿವೇಶದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಖರ್ಚು ವೆಚ್ಚವನ್ನು ಸಮಿತಿಯ ಆದಾಯಕ್ಕನುಗುಣವಾಗಿ ಸೀಮಿತಗೊಳಿಸುವ ಅವಶ್ಯಕತೆ ಹಾಗೂ ಅನಿವಾರ್ಯತೆ ಉಂಟಾಗಿರುವುದನ್ನು ಸಮಿತಿಯು ಮನಗೊಂಡು ಅದರಂತೆ ಪ್ರಸ್ತುತ ಸಮಿತಿಯ ಸ್ವಚ್ಚತೆ ಏಜೆನ್ಸಿ ಮಂಜುನಾಥ ಟ್ರೇಡರ್ಸ್, ಅರಸೀಕೆರೆ ಇವರ ಸ್ವಚ್ಚತಾ ಟೆಂಡರ್ ಅವಧಿಯನ್ನು **ಸೆಪ್ಟೆಂಬರ್ 2020 ರ ಮಾಹೆಯ ಅಂತ್ಯಕ್ಕೆ ಮುಕ್ತಾಯಗೊಳಿಸತಕ್ಕದೆಂದು** ಒಪ್ಪಿ ತೀರ್ಮಾನಿಸಲಾಯಿತು. ಹಾಗೂ ಅಕ್ಟೋಬರ್ 2020 ರ ಮಾಹೆಯಿಂದ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಗಳ ಸ್ವಚ್ಚತಾ ಕಾರ್ಯವನ್ನು ಪ್ರತಿ ವಾರದ ಅವಧಿಗೆ ನೇರವಾಗಿ ಸ್ವಚ್ಚತಾ ಕೆಲಸಗಾರರಿಂದ ಸ್ವಚ್ಚತಾ ಕೆಲಸ ನಿರ್ವಹಿಸಿ ಪ್ರತಿ ವಾರ ಸ್ವಚ್ಚತಾ ಕಾರ್ಯಕ್ಕೆ ತಗುಲಿದ ಬಾಬ್ತನ್ನು ಸಾದಿಲ್ವಾರು (Contingency) ಮುಖಾಂತರ ಪಾವತಿಸಿ ಸ್ವಚ್ಚತಾ ವೆಚ್ಚ ಕಡಿತಗೊಳಿಸಲು ಕ್ರಮವಹಿಸತಕ್ಕದ್ದೆಂದು ಸೂಚಿಸಲಾಯಿತು. ಮುಂದುವರೆದು ಚಾಲ್ತಿಯಲ್ಲಿರುವ ಮಂಜುನಾಥ ಟ್ರೇಡರ್ಸ್, ಅರಸೀಕೆರ ಇವರ

ಸ್ವಚ್ಚತಾ ಕಾರ್ಯದ ವೈಖರಿ ಬಗ್ಗೆ ಸಮಿತಿಯಲ್ಲಿದ್ದ ಬಹುತೇಕ ಮಾನ್ಯ ಸದಸ್ಯರಯಗಳು ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ಸೇರಿದಂತೆ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸ್ವಚ್ಚತಾ ಕಾರ್ಯ ಸಮಪರ್ಕವಾಗಿಲ್ಲವೆಂದು ದೂರಿದರು ಹಾಗೂ ಈ ಬಗ್ಗೆ ಸಂಬಂಧಪಟ್ಟ ಚಾಲ್ತಿ ಸ್ವಚ್ಚತಾ ಏಜೆನ್ಸಿಗೆ ನೋಟೀಸ್ ಜಾರಿಗೊಳಿಸಿ ಸಮರ್ಪಕವಾಗಿ ಸ್ವಚ್ಚತಾ ಕಾರ್ಯ ನಿರ್ವಹಿಸಲು ಕ್ರಮವಹಿಸುವಂತೆ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು. ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸ್ವಚ್ಚತಾ ಏಜೆನ್ಸಿಯವರು ಸ್ವಚ್ಚತಾ ಕಾರ್ಯವನ್ನು ಸಮರ್ಪಕವಾಗಿ ಕೈಗೊಂಡು ನಿರ್ವಹಿಸಿದ ನಂತರವಷ್ಟೆ ಸ್ವಚ್ಚತಾ ಸಿಬ್ಬಂದಿ ಸೇವೆಯ ಜುಲೈ ಮತ್ತು ಆಗಸ್ಟ್ 2020 ರ ಮಾಹೆಗಳ ಸ್ವಚ್ಚತಾ ಸಿಬ್ಬಂದಿ ಬಿಲ್ಲಿನ ಬಾಬ್ತನ್ನು ಸ್ವಚ್ಚತಾ ಕಾರ್ಯ ಪೂರ್ಣವಾಗಿರುವ ಬಗ್ಗೆ ಆಯಾ ಭಾಗದ ಮಾನ್ಯ ಸದಸ್ಯರುಗಳಿಂದ ಖಾತ್ರಿಪಡಿಸಿಕೊಂಡು ಪಾವತಿಸತಕ್ಕದೆಂದು ಒಪ್ಪಿ ತೀರ್ಮಾನಿಸಲಾಯಿತು. ತಪ್ಪಿದಲ್ಲಿ ಮೌಖಿಕ ದೂರಿನಂತೆ ತಡೆಹಿಡಿಯಲ್ಪಟ್ಟಿರುವ ಈ ಹಿಂದಿನ ಸ್ವಚ್ಚತಾ ಸೇವೆ ಬಿಲ್ಲುಗಳಾದ ಜುಲೈ ಹಾಗೂ ಆಗಸ್ಟ್ 2020 ಮಾಹೆಗಳ ಬಾಬ್ತು ಸೇರಿದಂತೆ ಸೆಪ್ಟಂಬರ್ 2020 ರ ಮಾಹೆಯ ಬಿಲ್ಲನ್ನೂ ಸಹ ತಡೆಹಿಡಿಯುವುದಲ್ಲದೆ ಸ್ವಚ್ಚತಾ ಏಜೆನ್ಸಿಯ ಇಡಿಗಂಟನ್ನು ಸಮಿತಿಗೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಕಾರ್ಯೋನ್ಮುಖವಾಗತಕ್ಕದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

(ಜಿ. ವಸಂತಕುಮಾರ್)
ಕಾರ್ಯದರ್ಶಿ (ಪ್ರ),
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.

(ಸಿ.ಎನ್. ಧರ್ಮಪ್ಪ)
ಅಧ್ಯಕ್ಷರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಅರಸೀಕೆರೆ.


12